# ಆತ್ಮ ನಿರ್ಭರ ಭಾರತ – ಸ್ವಾವಲಂಬಿ ಭಾರತ

## ಭಾಗ 2 : ವಲಸಿಗರು ಮತ್ತು ರೈತರು ಸೇರಿದಂತೆ ಬಡವರು

सत्यमेव जयते
Government Of India

**14.05.2020**



# ಕೋವಿಡ್ ನಂತರ ರೈತರು ಮತ್ತು ಗ್ರಾಮೀಣ ಆರ್ಥಿಕತೆಗೆ ನೇರ ಬೆಂಬಲ

- 4.22 ಲಕ್ಷ ಕೋಟಿ ಕೃಷಿ ಸಾಲ ಪಡೆದಿರುವ 3 ಕೋಟಿ ರೈತರು 3 ತಿಂಗಳ ಸಾಲ ಮರು ಪಾವತಿ ವಿಸ್ತರಣೆ ಸೌಲಭ್ಯ ಪಡೆದಿದ್ದಾರೆ.
- ಮಾರ್ಚ್ 1ರಿಂದ ಬಾಕಿ ಇರುವ ಬೆಳೆ ಸಾಲದ ಬಡ್ಡಿ ಸಹಾಯಧನ ಮತ್ತು ಪ್ರಮಾಣಿಕ ಮರು ಪಾವತಿ ಪ್ರೋತ್ಸಾಹಕವನ್ನು 2020ರ ಮೇ 31ರವರೆಗೆ ವಿಸ್ತರಿಸಲಾಗಿದೆ.
- 25 ಲಕ್ಷ ಹೊಸ ಕಿಸಾನ್ ಕ್ರೆಡಿಟ್ ಕಾರ್ಡ್ ಗಳನ್ನು 25 ಸಾವಿರ ಸಾಲಮಿತಯೊಂದಿಗೆ ಮಂಜೂರು ಮಾಡಲಾಗಿದೆ.



# ಕೋವಿಡ್ ನಂತರ ರೈತರಿಗೆ ಮತ್ತು ಗ್ರಾಮೀಣ ಆರ್ಥಿಕತೆಗೆ ಹಣಹರಿವಿನ ಬೆಂಬಲ

- **1.3.2020ರಿಂದ 30.04.2020ರವರೆಗೆ ಕೃಷಿಯಲ್ಲಿ 86,600 ಕೋಟಿ ರೂ.ಗಳ 63 ಲಕ್ಷ ಸಾಲಕ್ಕೆ ಅನುಮೋದನೆ**
- **ನಬಾರ್ಡ್ ನಿಂದ ಸಹಕಾರಿ ಬ್ಯಾಂಕ್ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಗಳಿಗೆ ಮಾರ್ಚ್ 2020ರಲ್ಲಿ ರೂ.29,500 ಕೋಟಿ ಮರು ಸಾಲ ಒದಗಿಸಲಾಗಿದೆ.**
- ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿಯಡಿ ರಾಜ್ಯಗಳಿಗೆ 2020ರ ಮಾರ್ಚ್ ನಲ್ಲಿ ಗ್ರಾಮೀಣ ಮೂಲಸೌಕರ್ಯಕ್ಕಾಗಿ 4200 ಕೋಟಿ ರೂ. ಬೆಂಬಲ ಒದಗಿಸಲಾಗಿದೆ.
- ಮಾರ್ಚ್ 2020ರಿಂದ ಸರ್ಕಾರಿ ಸಂಸ್ಥೆಗಳಲ್ಲಿ ಕೃಷಿ ಉತ್ಪನ್ನ ಸಂಗ್ರಹಣೆಗಾಗಿ 6700 ಕೋಟಿ ರೂಪಾಯಿಗಳ ಕಾರ್ಯ ಬಂಡವಾಳ ಮಿತಿ.



# ಕಳೆದ 2 ತಿಂಗಳುಗಳಿಂದ ವಲಸೆ ಮತ್ತು ನಗರ ಬಡವರಿಗೆ ಬೆಂಬಲ

- ಭಾರತ ಸರ್ಕಾರ ರಾಜ್ಯ ಸರ್ಕಾರಗಳಿಗೆ ರಾಜ್ಯ ವಿಪತ್ತು ಸ್ಪಂದನಾ ನಿಧಿ (ಎಸ್.ಡಿ.ಆರ್.ಎಫ್.) ಅನ್ನು ವಲಸಿಗರ ಆಶ್ರಯ ಮತ್ತು ಅವರಿಗೆ ಆಹಾರ, ನೀರು ಪೂರೈಸಲು ಬಳಸಿಕೊಳ್ಳಲು ಅನುಮತಿ ನೀಡಿದೆ.
- ಎಸ್.ಡಿ.ಆರ್.ಎಫ್. ನಿಧಿಯನ್ನು ತ್ವರಿತಗೊಳಿಸಿಕೊಳ್ಳಲು ಏಪ್ರಿಲ್ 3ರಂದು ಎಲ್ಲ ರಾಜ್ಯಗಳಿಗೆ ಮುಂಗಡವಾಗಿ ಕೇಂದ್ರ ಸರ್ಕಾರ ತನ್ನ ಪಾಲಿನ 11002 ಕೋಟಿ ರೂ. ಬಿಡುಗಡೆ ಮಾಡಿದೆ.
- **ಆಶ್ರಯದಲ್ಲಿರುವ ನಗರ ವಸತಿ ಹೀನರಿಗೆ (ಎಸ್.ಯು.ಎಚ್) ಲಾಕ್ ಡೌನ್ ವೇಳೆ ಶುಚಿಯಾದ ಮೂರು ಊಟವನ್ನು ಪ್ರತಿ ದಿನ ಅಂದರೆ ಮಾರ್ಚ್ 28, 2020ರಿಂದ ಅನ್ವಯವಾಗುವಂತೆ ನೀಡಲಾಗಿದೆ.**
- 12,000 ಎಸ್.ಎಚ್.ಜಿ.ಗಳು 3 ಕೋಟಿ ಮಾಸ್ಕ್ ಮತ್ತು 1.20 ಲಕ್ಷ ಲೀಟರ್ ಸ್ಯಾನಿಟೈಸರ್ ತಯಾರಿಸಿವೆ. ಇದು ನಗರ ಬಡವರಿಗೆ ಹೆಚ್ಚುವರಿ ಉದ್ಯೋಗಾವಕಾಶ ನೀಡಿದೆ.
- ಸ್ವಸಹಾಯ ಗುಂಪುಗಳಿಗೆ ರಿವಾಲ್ವಿಂಗ್ ಫಂಡ್ (ಆರ್.ಎಫ್) ವಿತರಣೆಯನ್ನು ಏಪ್ರಿಲ್ 2020 ರಲ್ಲಿ ಗುಜರಾತ್‌ನಲ್ಲಿ ಪ್ರಾಯೋಗಿಕ ಆಧಾರದ ಮೇಲೆ ಪೈಸಾ ಪೋರ್ಟಲ್‌ನಲ್ಲಿ ಆರಂಭಿಸಲಾಯಿತು ಮತ್ತು ಈಗ 2020 ರ ಮೇ ತಿಂಗಳಲ್ಲಿ ಎಲ್ಲಾ ರಾಜ್ಯಗಳಲ್ಲಿ ಆರಂಭವಾಗುತ್ತಿದೆ.
- ನಗರ ಬಡವರ 7200 ಹೊಸ ಸ್ವ ಸಹಾಯ ಗುಂಪುಗಳನ್ನು 2020ರ ಮಾರ್ಚ್ 15ರಿಂದ ರಚಿಸಲಾಗಿದೆ.





# ಮರಳುವ ವಲಸಿಗರಿಗೆ ಎಂಜಿಎನ್.ಆರ್.ಇ.ಜಿ.ಎಸ್. ಬೆಂಬಲ

- 2020 ಮೇ 12ರವರೆಗೆ 14.62 ಕೋಟಿ ಮಾನವ ದಿನಗಳನ್ನು ಸೃಷ್ಟಿಸಲಾಗಿದೆ
- ಈ ದಿನಾಂಕದವರಿಗೆ ಸುಮಾರು 10,000 ಕೋಟಿ ರೂ. ವಾಸ್ತವ ವೆಚ್ಚ ಮಾಡಲಾಗಿದೆ
- **ನಿನ್ನೆವರೆಗೆ 2.33 ಕೋಟಿ ಕೆಲಸ ಅಪೇಕ್ಷಿತರಿಗೆ 1.87 ಗ್ರಾಮ ಪಂಚಾಯ್ತಿಗಳಲ್ಲಿ ಕೆಲಸ ನೀಡಲಾಗಿದೆ.**
- **ಕಳೆದ ವರ್ಷ ಮೇಗೆ ಹೋಲಿಸಿದರೆ ಶೇ.40-50ಕ್ಕೂ ಹೆಚ್ಚು ಜನರು ನೋಂದಾಯಿಸಿ ಕೊಂಡಿದ್ದಾರೆ**
- **ಸರಾಸರಿ ಕೂಲಿಯ ದರ ಕಳೆದ ಹಣಕಾಸು ವರ್ಷದಲ್ಲಿದ್ದ ರೂ.182ರಿಂದ ರೂ.202ಕ್ಕೆ ಹೆಚ್ಚಳವಾಗಿದೆ.**
- **ಹಿಂತಿರುಗುವ ವಲಸಿಗರ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದೆ.**
- **ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ ಕಾಯಿದೆಯ ರೀತ್ಯ ವಲಸೆ ಕಾರ್ಮಿಕರಿಗೆ ಕೆಲಸ ನೀಡುವಂತೆ ಸೂಚಿಸಲಾಗಿದೆ.**
- ಮನ್ರೇಗಾ ಕಾಮಗಾರಿಗಳನ್ನು ಮುಂಗಾರಿನಲ್ಲೂ ಮುಂದುವರಿಸಲು ಯೋಜಿಸಲಾಗಿದೆ: ತೋಟಗಾರಿಕೆ, ಗಿಡ ನೆಡುವುದು, ಜಾನುವಾರ ಸಂಬಂಧಿ ಶೆಡ್ ಇತ್ಯಾದಿಗೆ.



# ಕಾರ್ಮಿಕ ಸಂಹಿತೆ – ಕಾರ್ಮಿಕರಿಗೆ ಪ್ರಯೋಜನ

- ಕನಿಷ್ಠ ವೇತನದ ಸಾರ್ವತ್ರೀಕರಣ ಮತ್ತು  ಅಸಂಘಟಿತ ವಲಯದ ಕಾರ್ಮಿಕರೂ ಸೇರಿ ಎಲ್ಲ ಕಾರ್ಮಿಕರಿಗೆ ಸಕಾಲದಲ್ಲಿ ವೇತನ ಪಾವತಿ – ಪ್ರಸ್ತುತ ಕನಿಷ್ಠ ವೇತನ ಕೇವಲ ಶೇ.30ರಷ್ಟು ಕಾರ್ಮಿಕರಿಗೆ ಮಾತ್ರ ಅನ್ವಯ.
- ರಾಷ್ಟ್ರೀಯ ಫ್ಲೋರ್ ವೇಜ್ ಶಾಸನಬದ್ಧ ಪರಿಕಲ್ಪನೆಯನ್ನು ಪರಿಚಯಿಸಲಾಗಿದೆ: ಕನಿಷ್ಠ ವೇತನದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ತಗ್ಗಿಸುತ್ತದೆ.
- ಕನಿಷ್ಠ ವೇತನವನ್ನು ನಿಗದಿಪಡಿಸುವುದು ಸರಳೀಕೃತವಾಗಿದ್ದು, ಕಡಿಮೆ ಸಂಖ್ಯೆಯ ವೇತನ ದರಗಳು ಮತ್ತು ಉತ್ತಮ ಅನುಸರಣೆಗೆ ಕಾರಣವಾಗುತ್ತದೆ.
- ಎಲ್ಲ ಕಾರ್ಮಿಕರಿಗೆ ನೇಮಕಾತಿ ಪತ್ರ – ಇದು ನಿಯಮಬದ್ಧಗೊಳಿಸುವುದನ್ನು ಉತ್ತೇಜಿಸುತ್ತದೆ.
- ಎಲ್ಲ ನೌಕರರಿಗೂ ವಾರ್ಷಿಕ ಆರೋಗ್ಯ ತಪಾಸಣೆ
- ಔದ್ಯೋಗಿಕ ಸುರಕ್ಷತೆ ಮತ್ತು ಆರೋಗ್ಯ (ಒಎಸ್ ಎಚ್) ಕೋಡ್ 10 ಕ್ಕಿಂತ ಕಡಿಮೆ ಕಾರ್ಮಿಕರ ಮಿತಿ ಹೊಂದಿದ್ದರೂ ಸಹ ಅಪಾಯಕಾರಿ ಸ್ವರೂಪದ ಕೆಲಸದಲ್ಲಿ ತೊಡಗಿರುವ ಸಂಸ್ಥೆಗಳಿಗೆ ಅನ್ವಯಿಸುತ್ತದೆ.



# ಕಾರ್ಮಿಕ ಸಂಹಿತೆ- ಕಾರ್ಮಿಕರಿಗೆ ಪ್ರಯೋಜನ

- ಗುತ್ತಿಗೆದಾರರ ಮೂಲಕ ಕೆಲಸ ಮಾಡುವ ವಲಸೆ ಕಾರ್ಮಿಕರಲ್ಲದೆ, ತಮ್ಮದೇ ಆದ ರಾಜ್ಯಕ್ಕೆ ನೇರವಾಗಿ ಬರುವ ವಲಸೆ ಕಾರ್ಮಿಕರನ್ನು ನೇರವಾಗಿ ಮಾಲೀಕರು ನೇಮಿಸಿಕೊಳ್ಳಲು ಅಂತರ – ರಾಜ್ಯ ವಲಸೆ ಕಾರ್ಮಿಕರ ವ್ಯಾಖ್ಯೆಯನ್ನು ಪರಿಷ್ಕರಿಸಲಾಗಿದೆ.
- ವಲಸೆ ಕಾರ್ಮಿಕರ ಕಲ್ಯಾಣ ಯೋಜನೆ ಪ್ರಯೋಜನಗಳ ಪೋರ್ಟಬಲಿಟಿ
- **ಕೇವಲ ಅಧಿಸೂಚಿತ ಜಿಲ್ಲೆಗಳು / ಪ್ರದೇಶಗಳಿಗೆ ಪ್ರತಿಯಾಗಿ ಭಾರತಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಮತ್ತು 10 ಅಥವಾ ಹೆಚ್ಚು ನೌಕರರಿರುವ ಎಲ್ಲ ಸ್ಥಾಪನೆಗಳಲ್ಲಿ ಇಸಿಐಸಿ ವ್ಯಾಪ್ತಿಯ ವಿಸ್ತರಣೆ.**
- **10 ಸಿಬ್ಬಂದಿಗಿಂತ ಕಡಿಮೆ ಇರುವ ಸ್ಥಾಪನೆಗಳಲ್ಲಿ ಸ್ವಯಂ ಆಧಾರದ ಮೇಲೆ ಇಎಸ್.ಐ.ಸಿ. ವ್ಯಾಪ್ತಿಯ ವಿಸ್ತರಣೆ**
- 10 ಉದ್ಯೋಗಿಗಳಿಗಿಂತ ಕಡಿಮೆ ಇರುವ ಅಪಾಯಕಾರಿಯಾದ ಕೈಗಾರಿಕೆಗಳಲ್ಲಿ ಕೇಂದ್ರ ಸರ್ಕಾರದ ಅಧಿಸೂಚನೆಯ ಮೂಲಕ ಕಡ್ಡಾಯ ಇಎಸ್.ಐ.ಸಿ. ವ್ಯಾಪ್ತಿ



# ಕಾರ್ಮಿಕ ಸಂಹಿತೆ- ಕಾರ್ಮಿಕರಿಗೆ ಪ್ರಯೋಜನಗಳು

- ಗಿಗ್ ಕಾರ್ಮಿಕರು ಮತ್ತು ಪ್ಲಾಟ್ ಫಾರ್ಮ್ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಯೋಜನೆ
- ಕೆಲಸದಿಂದ ತೆಗೆದುಹಾಕಿದ ಉದ್ಯೋಗಿಗಳಿಗೆ ಮರು ಕೌಶಲ್ಯ ನಿಧಿಯ ಪರಿಚಯ
- ಎಲ್ಲ ಉದ್ಯೋಗಗಳು ಮಹಿಳೆಯರಿಗೆ ಮುಕ್ತ ಮತ್ತು ಸುರಕ್ಷತೆಯೊಂದಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಲು ಅನುಮತಿ
- ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನಿಧಿಗೆ ಅವಕಾಶ
- ನಿಶ್ಚಿತ ಅವಧಿಯ ಉದ್ಯೋಗಕ್ಕೆಗ್ರ್ಯಾಚ್ಯುಯಿಟಿ – 5 ವರ್ಷಕ್ಕೆ ಬದಲಾಗಿ 1 ವರ್ಷ ಸೇವೆ ಪೂರ್ಣಗೊಂಡವರಿಗೂ ಗ್ರ್ಯಾಚ್ಯುಯಿಟಿ



# ನಿನ್ನೆ ಪ್ರಕಟಿಸಲಾದ ಕ್ರಮಗಳು

सत्यमेव जयते
Government Of India

- ನಿನ್ನೆ ವಾಣಿಜ್ಯಕ್ಕೆ ಸಾಮಾನ್ಯವಾಗಿ ಮತ್ತು ಎಂಎಸ್.ಎಂಇಗಳಿಗೆ ನಿರ್ದಿಷ್ಟವಾಗಿ ಹಲವಾರು ಕ್ರಮಗಳನ್ನು ಘೋಷಿಸಲಾಗಿದೆ. ನಿಮ್ಮ ತಿಳಿವಳಿಕೆಗಾಗಿ ಎಲ್ಲಾ ವ್ಯವಹಾರಗಳಿಗೆ ಸಹಾಯ ಮಾಡುವ ಕ್ರಮಗಳನ್ನು ಮತ್ತೆ ಪಟ್ಟಿ ಮಾಡಲಾಗಿದೆ:
- **ಎಂ.ಎಸ್.ಎಂ.ಇ. ಸೇರಿದಂತೆ ವಾಣಿಜ್ಯಕ್ಕೆ ರೂ. 3 ಲಕ್ಷ ಕೋಟಿ ತುರ್ತು ಕಾರ್ಯ ಬಂಡವಾಳ ಸೌಲಭ್ಯ**
- **200 ಕೋಟಿ ರೂ.ವರೆಗಿನ ಸರ್ಕಾರಿ ಟೆಂಡರುಗಳಿಗೆ ಜಾಗತಿಕ ಟೆಂಡರ್ ಇಲ್ಲ.**
- ಸಂಘಟಿತ ಕಾರ್ಮಿಕರು ಮತ್ತು ವಾಣಿಜ್ಯಗಳಿಗೆ ಮತ್ತೆ 3 ತಿಂಗಳುಗಳ ಕಾಲ ಅಂದರೆ 2020ರ ಜೂನ್, ಜುಲೈ ಮತ್ತು ಆಗಸ್ಟ್ ಸಂಬಳ ಮಾಸಕ್ಕೆ ಇಪಿಎಫ್ ಬೆಂಬಲದ ವಿಸ್ತರಣೆ – ಇದು ಎಂಎಸ್ಎಂಇಯ ಕಾರ್ಮಿಕರು ಮತ್ತು ಇತರ ವಾಣಿಜ್ಯಕ್ಕೆ ಲಿಕ್ವಿಡಿಟಿ ಒದಗಿಸುತ್ತದೆ.
- ಪಿಎಂಜಿಕೆಪಿ ಮತ್ತು ಅದರ ವಿಸ್ತರಣೆಯ ಬೆಂಬಲದಡಿ ಬಾರದ ಎಲ್ಲ ಸ್ಥಾಪನೆಗಳಿಗೆ ಮುಂದಿನ 3 ತಿಂಗಳುಗಳ ಕಾಲ ಮಾಲೀಕರ ಮತ್ತು ಕಾರ್ಮಿಕರ ಇಪಿಎಫ್ ವಂತಿಗೆ 3 ತಿಂಗಳುಗಳ ಕಾಲ ಶೇ.12ರಿಂದ ಶೇ.10ಕ್ಕೆ ಇಳಿಕೆ – ಇದು ಮಧ್ಯಮ ವರ್ಗದ ಕಾರ್ಮಿಕರಿಗೆ ನೆರವಾಗುತ್ತದೆ – ಎಂ.ಎಸ್.ಎಂ.ಇ ಮತ್ತು ಇತರ ವಾಣಿಜ್ಯದಲ್ಲಿ ಇದು ಕಾರ್ಮಿಕರಿಗೆ ಲಿಕ್ವಿಟಿಡಿ ಒದಗಿಸುತ್ತದೆ.
- ಇಪಿಸಿ ಮತ್ತು ರಿಯಾಯಿತಿ ಒಪ್ಪಂದಗಳಿಗೆ ಸಂಬಂಧಿಸಿದಂತೆ ಒಪ್ಪಂದದ ಕಟ್ಟುಪಾಡುಗಳನ್ನು ಪೂರ್ಣಗೊಳಿಸಲು ಆರು ತಿಂಗಳವರೆಗೆ ವಿಸ್ತರಿಸುವ ಮೂಲಕ ಗುತ್ತಿಗೆದಾರರಿಗೆ ಪರಿಹಾರ
- ಚಾರಿಟಬಲ್ ಟ್ರಸ್ಟ್ ಗಳು ಮತ್ತು ಸಾಂಸ್ಥಿಕವಲ್ಲದ ವ್ಯವಹಾರಗಳು ಮತ್ತು ವೃತ್ತಿಗಳಿಗೆ ತಕ್ಷಣವೇ ವಿತರಿಸಬೇಕಾದ ಆದಾಯ ತೆರಿಗೆ ಮರುಪಾವತಿ ಬಾಕಿ ಇರುವುದರಿಂದ ವ್ಯವಹಾರಕ್ಕೆ ತೆರಿಗೆ ಪರಿಹಾರ.
- ಆರ್ಥಿಕ ವರ್ಷ 20-21ರ ಉಳಿದ ಅವಧಿಗೆ ಮೂಲದಲ್ಲೇ ತೆರಿಗೆ ಕಡಿತ ಮತ್ತು ಮೂಲದಲ್ಲೇ ತೆರಿಗೆ ಸಂಗ್ರಹ ದರದಲ್ಲಿ ಶೇ. 25 ಇಳಿಕೆ ಮತ್ತು ವಿವಿಧ ತೆರಿಗೆ ಸಂಬಂಧಿತ ಅನುಸರಣೆಗಳ ಅವಧಿ ವಿಸ್ತರಣೆ – ಇದರಿಂದ ಎಲ್ಲ ವಾಣಿಜ್ಯಗಳಿಗೂ ಪ್ರಯೋಜನವಾಗಲಿದೆ.

सत्यमेव जयते
Goverment Of India



# ವಲಸಿಗರು, ರೈತರು ಸೇರಿ ಬಡವರು

**2 ತಿಂಗಳು ವಲಸಿಗರಿಗೆ ಉಚಿತ ಆಹಾರ ಧಾನ್ಯ ಪೂರೈಕೆ**

- ವಿವಿಧ ರಾಜ್ಯಗಳಲ್ಲಿನ ವಲಸಿಗರಿಗೆ ಆಹಾರ ಧಾನ್ಯದ ನೆರವಿನ ಅಗತ್ಯವಿದೆ
- ರಾಜ್ಯದಲ್ಲಿ ಎನ್.ಎಫ್.ಎಸ್.ಎ. ಅಥವಾ ರಾಜ್ಯ ಕಾರ್ಡ್ ಪ್ರಯೋಜನ ಪಡೆಯದೆ ಸಿಲುಕಿರುವ ವಲಸಿಗರಿಗೆ ಪ್ರತಿ ವ್ಯಕ್ತಿಗೆ 5 ಕೆ.ಜಿ. ಆಹಾರ ಧಾನ್ಯ ಮತ್ತು ಕುಟುಂಬಕ್ಕೆ 1 ಕೆಜಿ ಕಾಳನ್ನು ಎರಡು ತಿಂಗಳು ನೀಡಲಾಗುತ್ತದೆ.
- ಸುಮಾರು 8 ಕೋಟಿ ವಲಸಿಗರು ಇದರ ಪ್ರಯೋಜನ ಪಡೆವ ನಿರೀಕ್ಷೆ
- **ರೂ. 3500 ಕೋಟಿ ಅನ್ನು ಈ ಮಧ್ಯಸ್ಥಿಕೆಗೆ 2 ತಿಂಗಳುಗಳ ಕಾಲ ವೆಚ್ಚ ಮಾಡಲಾಗುವುದು.**
- ಭಾರತ ಸರ್ಕಾರದಿಂದ ಪೂರ್ಣ ವೆಚ್ಚ ಭರಿಸಲಾಗುತ್ತದೆ.
- ರಾಜ್ಯ ಸರ್ಕಾರಗಳು ವಲಸಿಗರ ಗುರುತಿಸುವಿಕೆ, ಅನುಷ್ಠಾನ ಮತ್ತು ವಿತರಣೆ ಮತ್ತು ವಿವರವಾದ ಮಾರ್ಗಸೂಚಿ ನೀಡಲು ಜವಾಬ್ದಾರವಾಗಿರುತ್ತವೆ.



**2021ರ ಮಾರ್ಚ್ ನಿಂದ, ಭಾರತದ ಯಾವುದೇ ನ್ಯಾಯಬೆಲೆ ಅಂಗಡಿಯಿಂದ ವಲಸಿಗರು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಡಿತರ)ಯ ಸೌಲಭ್ಯ ಪಡೆಯಲು ತಂತ್ರಜ್ಞಾನ ವ್ಯವಸ್ಥೆ**

- ವಲಸಿಗರ ಕುಟುಂಬಗಳು ಇತರ ರಾಜ್ಯದಲ್ಲಿ ಆಹಾರ ಪಡೆಯಲಾಗುತ್ತಿಲ್ಲ.
- ಈ ಯೋಜನೆ ವಲಸಿಗ ಫಲಾನುಭವಿಗಳಿಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ದೇಶದ ಯಾವುದೇ ನ್ಯಾಯಬೆಲೆ ಅಂಗಡಿಯಿಂದ (20 ರಾಜ್ಯಗಳಲ್ಲಿ ಪರಿಚಯಿಸಲಾಗಿರುವ ಅಂತರ – ರಾಜ್ಯ ಪೋರ್ಟಬಲಿಟಿ) ಪಡೆಯಬಹುದು.
- ಪ್ರಧಾನಮಂತ್ರಿಯವರ ತಂತ್ರಜ್ಞಾನ ಚಾಲಿತ ವ್ಯವಸ್ಥೆಯ ಸುಧಾರಣೆಯ ಭಾಗ
- ಆಗಸ್ಟ್ 2020ರ ಹೊತ್ತಿಗೆ ರಾಷ್ಟ್ರೀಯ ಪೋರ್ಟಬಲಿಟಿಯಡಿ 23 ರಾಜ್ಯಗಳಲ್ಲಿ ಶೇ.83ರಷ್ಟು ಪಿಡಿಎಸ್ ಜನಸಂಖ್ಯೆ ವ್ಯಾಪ್ತಿಯ 67 ಕೋಟಿ ಫಲಾನುಭವಿಗಳು
- **ಶೇ.100 ರಾಷ್ಟ್ರೀಯ ಪೋರ್ಟಬಲಿಟಿಯನ್ನು 2021ರ ಮಾರ್ಚ್‌ಯೊಳಗೆ ಸಾಧಿಸಲಾಗುವುದು.**
- **ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಸಂಪೂರ್ಣ ಆಟೋಮೇಷನ್ ಅನ್ನು 2021ರ ಮಾರ್ಚ್ ನೊಳಗೆ ಪೂರ್ಣಗೊಳಿಸಲಿವೆ.**



# ವಲಸೆ ಕಾರ್ಮಿಕರಿಗೆ/ನಗರ ಬಡವರಿಗೆ ಕೈಗೆಟಕುವ ದರ ಬಾಡಿಗೆ ಮನೆಗಳ ಸಮುಚ್ಛಯ (ಎಆರ್.ಎಚ್.ಸಿ.)

ವಲಸೆ ಕಾರ್ಮಿಕರು/ನಗರ ಬಡವರು ಕೈಗೆಟಕುವ ದರದ ಬಾಡಿಗೆ ಮನೆ ಪಡೆಯುವ ಸವಾಲು ಎದುರಿಸುತ್ತಿದ್ದಾರೆ.

ಸರ್ಕಾರ ಪಿಎಂಎವೈ ಅಡಿಯಲ್ಲಿ ವಲಸೆ ಕಾರ್ಮಿಕರು/ನಗರ ಬಡವರಿಗೆ ಕೈಗೆಟಕುವ ದರದ ಬಾಡಿಗೆ ಮನೆಯೊಂದಿಗೆ ಸುಗಮ ಜೀವನಕ್ಕೆ ಯೋಜನೆ ಆರಂಭಿಸಲಿದೆ.

i. ಸರ್ಕಾರದ ಆರ್ಥಿಕ ನೆರವಿನ ನಗರ ವಸತಿಗಳನ್ನು ಪಿಪಿಪಿ ಮಾದರಿ ಮೂಲಕ ಕೈಗೆಟಕುವ ದರ ಬಾಡಿಗೆ ಮನೆ ಸಮುಚ್ಛಯ (ಎ.ಆರ್.ಎಚ್.ಸಿ.)ವಾಗಿ ಪರಿವರ್ತಿಸಲು.

ii. ಉತ್ಪಾದನಾ ಘಟಕಗಳು, ಕೈಗಾರಿಕೆಗಳು, ಸಂಸ್ಥೆಗಳು, ಸಂಘಗಳು ತಮ್ಮ ಖಾಸಗಿ ಭೂಮಿಯಲ್ಲಿ ಕೈಗೆಟುಕುವ ಬಾಡಿಗೆ ವಸತಿ ಸಂಕೀರ್ಣಗಳನ್ನು (ಎಆರ್ಎಚ್ಸಿ) ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು ಪ್ರೋತ್ಸಾಹಿಸುವುದು; ಮತ್ತು

iii. ಕೈಗೆಟುಕುವ ಬಾಡಿಗೆಯ ವಸತಿ ಸಂಕೀರ್ಣಗಳನ್ನು (ಎಆರ್ಎಚ್ಸಿ) ಅಭಿವೃದ್ಧಿಪಡಿಸಲು ಮತ್ತು ನಿರ್ವಹಿಸಲು ರಾಜ್ಯ ಸರ್ಕಾರಿ ಸಂಸ್ಥೆಗಳು / ಕೇಂದ್ರ ಸರ್ಕಾರಿ ಸಂಸ್ಥೆಗಳನ್ನು ಇದೇ ಮಾದರಿಯಲ್ಲಿ ಪ್ರೋತ್ಸಾಹಿಸುವುದು.

ಸಚಿವಾಲಯವು ವಿವರವಾದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಿದೆ.



# ಮುದ್ರಾ ಶಿಶು ಸಾಲಕ್ಕೆ ರೂ. 1500 ಕೋಟಿ ಬಡ್ಡಿ ಸಹಾಯಧನ

- ಮುದ್ರಾ ಅಡಿಯಲ್ಲಿನ ಸಣ್ಣ ಉದ್ಯಮಗಳು ಕೂಡ ಸಂಕಷ್ಟ ಅನುಭವಿಸಿವೆ ಮತ್ತು ಇಎಂಐಗಳನ್ನು ಪಾವತಿಸುವ ಅವುಗಳ ಸಾಮರ್ಥ್ಯದ ಮೇಲೂ ಪರಿಣಾಮ ಬೀರಿದೆ.
- ಆರ್.ಬಿ.ಐ.ನಿಂದ ಸಾಲ ಪಾವತಿಯ ಅವಧಿ ವಿಸ್ತರಣೆ ಆಗಿದೆ.
- ಪ್ರಸಕ್ತ ಮುದ್ರಾ –ಶಿಶು ಸಾಲವು ರೂ.1.62 ಲಕ್ಷ ಕೋಟಿಯಾಗಿದೆ (ಗರಿಷ್ಠ ಸಾಲದ ಮೊತ್ತ 50,000 ರೂ.)
- **ಭಾರತ ಸರ್ಕಾರ ಪ್ರಾಮಾಣಿಕ ಮರುಪಾವತಿಗೆ ಶೇ.2ರ ಬಡ್ಡಿ ಸಹಾಯಧನವನ್ನು 12 ತಿಂಗಳುಗಳ ಕಾಲ ನೀಡಲಿದೆ.**
- ಮುದ್ರಾ ಶಿಶು ಸಾಲಕ್ಕೆ 1500 ಕೋಟಿ ರೂ. ಪರಿಹಾರ.



# ಬೀದಿ ಬದಿ ವ್ಯಾಪಾರಿಗಳಿಗೆ ರೂ. 5000 ಕೋಟಿ ವಿಶೇಷ ಸಾಲ ಸೌಲಭ್ಯ

- ಕೋವಿಡ್ 19ರಿಂದ ಬೀದಿ ಬದಿ ವ್ಯಾಪಾರಿಗಳ ಜೀವನೋಪಾಯದ ಮೇಲೆ ಪ್ರತೀಕೂಲ ಪರಿಣಾಮ ಬೀರಿದೆ.
- ಬೀದಿ ಬದಿ ವ್ಯಾಪಾರಿಗಳಿಗೆ ಸಾಲ ದೊರಕಿಸಲು ಸರ್ಕಾರ ಒಂದು ತಿಂಗಳೊಳಗೆ ವಿಶೇಷ ಯೋಜನೆಯನ್ನು ಆರಂಭಿಸಿತ್ತಿದೆ.
- ಆರಂಭಿಕ ಕಾರ್ಯ ಬಂಡವಾಳ 10,000 ರೂ. ವರೆಗೆ
- ಹಣದ ಪುರಸ್ಕಾರದೊಂದಿಗೆ ಡಿಜಿಟಲ್ ಪಾವತಿಗೆ ಪ್ರೋತ್ಸಾಹಕ ಮತ್ತು ಉತ್ತಮ ಮರುಪಾವತಿ ನಡೆವಳಿಕೆಯವರಿಗೆ ಹೆಚ್ಚಿನ ಕಾರ್ಯ ಬಂಡವಾಳದ ಸಾಲ ಸೌಲಭ್ಯ.
- 50 ಲಕ್ಷ ಬೀದಿ ಬದಿ ಮಾರಾಟಗಾರರಿಗೆ ಬೆಂಬಲ
- 5000 ಕೋಟಿ ರೂ. ಲಿಕ್ವಿಡಿಟಿ ಒದಗಿಸುತ್ತದೆ.



## ಸಿಎಲ್‌ಎಸ್‌ಎಸ್ ವಿಸ್ತರಣೆ ಮೂಲಕ ವಸತಿ ಕ್ಷೇತ್ರ ಮತ್ತು ಮಧ್ಯಮ ಆದಾಯದ ಗುಂಪಿಗೆ ಉತ್ತೇಜನ ನೀಡಲು 70,000 ಕೋಟಿ ರೂ.

- ಮಧ್ಯಮ ಆದಾಯದ ಗುಂಪಿಗೆ (ವಾರ್ಷಿಕ ರೂ.6-12 ಲಕ್ಷಗಳು) ಸಬ್ಸಿಡಿ ಸಂಪರ್ಕಿತ ಸಾಲ ಯೋಜನೆ ಮಾರ್ಚ್ 2017ರಿಂದ ಕಾರ್ಯಾರಂಭವಾಗಿದೆ.
- ಸಿಎಲ್‌ಎಸ್‌ಎಸ್. ಅನ್ನು 2020ರ ಮಾರ್ಚ್ 31ರವರೆಗೆ ವಿಸ್ತರಿಸಲಾಗಿತ್ತು.
- ಈ ಯೋಜನೆಯಿಂದ 3.3. ಲಕ್ಷ ಮಧ್ಯಮ ವರ್ಗದ ಕುಟುಂಬಗಳಿಗೆ ಈವರೆಗೆ ಪ್ರಯೋಜನವಾಗಿದೆ. ಸರ್ಕಾರ ಸಿಎಲ್‌ಎಸ್‌ಎಸ್ ಯೋಜನೆಯನ್ನು ಮಾರ್ಚ್ 2021ರವರೆಗೆ ವಿಸ್ತರಿಸುತ್ತಿದೆ.
- **2.5 ಲಕ್ಷ ಮಧ್ಯಮ ಆದಾಯ ಕುಟುಂಬಗಳು 2020-21ರ ಸಾಲಿನಲ್ಲಿ ಪ್ರಯೋಜನ ಪಡೆಯಲಿವೆ.**
- **ವಸತಿಯಲ್ಲಿ 70 ಸಾವಿರ ಕೋಟಿಗೂ ಅಧಿಕ ಹೂಡಿಕೆಗೆ ಇದು ಅವಕಾಶ ನೀಡಲಿದೆ**
- ಉದ್ಯೋಗ ಸೃಷ್ಟಿಸಲಿದೆ.
- ಉಕ್ಕು, ಸಿಮೆಂಟ್, ಸಾರಿಗೆ ಮತ್ತು ಇತರ ನಿರ್ಮಾಣ ಸಾಮಗ್ರಿಗಳಿಗೆ ಬೇಡಿಕೆ ಹೆಚ್ಚಿಸಲಿದೆ.



# ಕಾಂಪಾ ನಿಧಿ ಬಳಸಿ ರೂ.6000ಕೋಟಿ ಉದ್ಯೋಕ್ಕೆಒತ್ತು

- ನಮ್ಮ ನಾಗರಿಕರಿಗೆ ಉದ್ಯೋಗಾವಕಾಶ ಸೃಷ್ಟಿಸುವ ಅಗತ್ಯವಿದೆ.
- ಕಡ್ಡಾಯ ಅರಣ್ಯೀಕರಣ ನಿಧಿ ಕಾಯಿದೆ 2016ರಡಿ ಕಡ್ಡಾಯ ಅರಣ್ಯೀಕರಣ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ (ಕಾಂಪಾ) ಸ್ಥಾಪಿಸಲಾಗಿದೆ.
- 6000 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಶೀಘ್ರ ಅನುಮೋದನೆ.
- ನಿಧಿಯನ್ನು ರಾಜ್ಯ ಸರ್ಕಾರಗಳು ಈ ಕೆಳಗಿನವುಗಳಿಗೆ ಬಳಸಬಹುದು -
  - ಅರಣ್ಯೀಕರಣ ಮತ್ತು ನೆಡುತೋಪು ಕಾಮಗಾರಿ, ನಗರ ಪ್ರದೇಶಗಳೂ ಸೇರಿ.
  - ಕೃತಕ ಪುನರುತ್ಪಾದನೆ, ನೆರವಿನ ನೈಸರ್ಗಿಕ ಪುನರುತ್ಪಾದನೆ
  - ಅರಣ್ಯ ನಿರ್ವಹಣೆ, ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕಾರ್ಯಗಳು
  - ಅರಣ್ಯ ಸಂರಕ್ಷಣೆ, ಅರಣ್ಯ ಮತ್ತು ವನ್ಯಜೀವಿ ಸಂಬಂಧಿತ ಮೂಲಸೌಕರ್ಯ ಅಭಿವೃದ್ಧಿ, ವನ್ಯಜೀವಿ ಸಂರಕ್ಷಣೆ ಮತ್ತು ನಿರ್ವಹಣೆ ಇತ್ಯಾದಿ
- ನಗರ, ಅರೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಸೃಷ್ಟಿಸಲಿದೆ.
- ಬುಡಕಟ್ಟು/ಆದಿವಾಸಿಗಳಿಗೆ ಉದ್ಯೋಗಾವಕಾಶ ಸೃಷ್ಟಿಸಲಿದೆ.



# ನಬಾರ್ಡ್ ಮೂಲಕ ರೈತರಿಗೆ ರೂ. 30,000 ಕೋಟಿ ಹೆಚ್ಚುವರಿ ತುರ್ತು ಕಾರ್ಯ ಬಂಡವಾಳ ನೆರವು

- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಣಕಾಸಿನ ಸಂಪನ್ಮೂಲದ ಕೊರತೆ ಇದೆ
- ಆರ್.ಆರ್.ಬಿಗಳು ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕುಗಳು ಸಾಲ ನೀಡಿಕೆಯ ಪ್ರಮುಖ ಮೂಲಗಳಾಗಿವೆ
- ನಬಾರ್ಡ್ ಬೆಳೆ ಸಾಲದ ಅವಶ್ಯಕತೆಗಾಗಿ ಗ್ರಾಮೀಣ ಸಹಕಾರಿ ಬ್ಯಾಂಕುಗಳು ಮತ್ತು ಆರ್.ಆರ್.ಬಿಗಳಿಗೆ ಹೆಚ್ಚುವರಿ 30,000 ಕೋಟಿ ರೂ. ಮರು ಹಣಕಾಸು ನೆರವು ನೀಡಲಿದೆ
- **ಇದು ನಬಾರ್ಡ್ ಸಾಮಾನ್ಯ ಮರು ಸಾಲ ಮಾರ್ಗದಲ್ಲಿ ಈ ವರ್ಷ ನೀಡುವ 90000 ಕೋಟಿ ರೂ.ಗಳಿಗಿಂತ ಮೇಲೆ ಮತ್ತು ಹೆಚ್ಚಾಗಿರುತ್ತದೆ.**
- ಫ್ರಂಟ್ ಲೋಡೆಡ್ ಆನ್ ಟಾಪ್ ಸೌಲಭ್ಯವನ್ನು 33 ರಾಜ್ಯ ಸಹಕಾರಿ ಬ್ಯಾಂಕ್ ಗಳು, 351 ಜಿಲ್ಲಾ ಸಹಕಾರಿ ಬ್ಯಾಂಕ್ ಗಳು ಮತ್ತು 43 ಆರ್.ಆರ್.ಬಿ.ಗಳಿಗೆ ಅವುಗಳ ಸಾಲದ ನೀಡಿಕೆ ಆಧಾರದ ಮೇಲೆ ಲಭಿಸಲಿದೆ.
- **3 ಕೋಟಿ ರೈತರಿಗೆ ಪ್ರಯೋಜನವಾಗಲಿದೆ –ಬಹುತೇಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ**
- ಸುಗ್ಗಿ ನಂತರ (ಹಿಂಗಾರು) ಮತ್ತು ಪ್ರಸಕ್ತ ಮುಂಗಾರು ಅಗತ್ಯಗಳನ್ನು ಮೇ/ಜೂನ್ ನಲ್ಲಿ ಪೂರೈಸಿಕೊಳ್ಳಲು



## 2.5 ಕೋಟಿ ರೈತರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ರೂ 2 ಲಕ್ಷ ಕೋಟಿ ರಿಯಾಯಿತಿಯಸಾಲ ಪ್ರೋತ್ಸಾಹ

- ಪಿಎಂ –ಕಿಸಾನ್ ಫಲಾನುಭವಿಗಳಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ರಿಯಾಯಿತಿ ದರದ ಸಾಲ ನೀಡಿಕೆಗೆ ವಿಶೇಷ ಅಭಿಯಾನ
- ಮೀನುಗಾರರು ಮತ್ತು ಪಶುಸಂಗೋಪನಾ ರೈತರು ಈ ಅಭಿಯಾನದಲ್ಲಿ ಸೇರಲಿದ್ದಾರೆ.
- ಇದು ಅಂಥ ರೈತರಿಗೆ ರಿಯಾಯಿತಿಯ ಬಡ್ಡಿ ದರದಲ್ಲಿ ಸಾಂಸ್ಥಿಕ ಸಾಲ ಪಡೆಯಲು ಅವಕಾಶ ನೀಡುತ್ತದೆ.
- 2.5 ಕೋಟಿ ರೈತರು ಇದರಡಿ ಸೇರಲಿದ್ದಾರೆ ಮತ್ತು 2 ಲಕ್ಷ ಕೋಟಿ ರೂಪಾಯಿ ಸಾಲದ ಹರಿವಿನ ಪ್ರಯೋಜನ ಪಡೆಯಲಿದ್ದಾರೆ.



# ಧನ್ಯವಾದಗಳು